KH ಕಲಾ ಸೌಧ

ಇಂದ,
**KH** ಕಲಾ ಸೌಧ
ರಾಮಾಂಜನೇಯ ಗುಡ್ಡದ ಆವರಣ,
ಹನುಮಂತ ನಗರ, ಬೆಂಗಳೂರು – **560 050**

## ವಿಷಯ: KH ಕಲಾ ಸೌಧಕ್ಕೆ ಆಮಂತ್ರಣ

ಆತ್ಮೀಯ ಕಲಾ ಬಂಧುಗಳೆ, ನಿಮಗಾಗಿ ಬೆಂಗಳೂರಿನ ಪ್ರತಿಷ್ಟಿತ ಬಡಾವಣೆಗಳಲ್ಲಿ ಒಂದಾದ ಹಾಗೂ ಕಲೆ ಮತ್ತು ಸಂಸ್ಕೃತಿಯ ಪ್ರತಿಬಿಂಬವಾಗಿರುವ ಬಸವನಗುಡಿಯ ಹನುಮಂತನಗರದಲ್ಲಿ ನಿಮ್ಮೆಲ್ಲರಿಗಾಗಿ **300** ಸುಖಾಸನಗಳುಳ್ಳ ಸುಸ್ಸಜ್ಜಿತ **KH** ಕಲಾ ಸೌಧ (ಕೆಂಗಲ್ ಹನುಮಂತಯ್ಯ ಕಲಾ ಸೌಧ) ಎಂಬ ಸಭಾಂಗಣದ ಕಲಾಪವನ್ನು ಪ್ರಾರಂಭಿಸಿದ್ದೇವೆ. ಈ ಸಭಾಂಗಣ ನಾಟಕ, ನಾಟ್ಯ ಹಾಗು ಸಂಗೀತದ ಎಲ್ಲಾವಿಧದ ಪ್ರಾಕಾರಗಳ ಪ್ರಯೋಗಗಳಿಗೆ ಸೂಕ್ತವಾಗಿದೆ.

ಈ ಪತ್ರದ ಮುಖಾಂತರ ನಾವು ನಿಮ್ಮನ್ನು ಈ ಕಲಾ ಸೌಧವನ್ನು ಪ್ರಾಮಾಣಿಸಿ ನೋಡಲು ಆಹ್ವಾನಿಸುತ್ತಿದ್ದೇವೆ. ನಿಮ್ಮ ಆಗಮನವು ನಮಗೆ ಹೊಸಾ ಹುರುಪು ನೀಡುವುದು ಎಂದರೆ ಅತಿಶಯೋಕ್ತಿಯೇನಲ್ಲ.ಈ ಕಲಾ ಸೌಧದ ಯಶಸ್ಸು ನಿಮ್ಮ ಸಹಭಾಗಿತ್ವದಲ್ಲಿದೆ.

ನಮ್ಮ ಅಂತರ್ಜಾಲದ ವಿಳಾಸ **www.khkalasoudha.org** ಇಲ್ಲಿ ನೀವು ಕಲಾ ಸೌಧದ ಎಲ್ಲಾವಿವರಗಳನ್ನು ಪಡೆಯಬಹುದಾಗಿದೆ. ನಿಮ್ಮ ಪ್ರಶ್ನೆಗಳಿಗೆ ಅಲ್ಲಿ ಉತ್ತರ ಸಿಗದಿದ್ದಲ್ಲಿ ದಯಮಾಡಿ ನಮ್ಮ ಇ-ವಿಳಾಸ **khkalasoudha@gmail.com** ಗೆ ಅಥವಾ ಮೇಲೆ ನಮೂದಿಸಿರುವ ವಿಳಾಸಕ್ಕೆ ಪತ್ರ ಬರೆಯಿರಿ.

ಈ ಪತ್ರದ ಮಹದ್ದೋದ್ದೇಶ, ನೀವು ಖುದ್ದಾಗಿ ಬಂದು ಕಲಾ ಸೌಧದ ಮೂಲೆ ಮೂಲೆಗಳ ಪರಿಚಯ ಪಡೆಯುವುದು. ಕಲಾ ಸೌಧದ ನಿಯೋಜಿತ ವೀಕ್ಷಣೆಗಾಗಿ ಶ್ರೀ ಕುಮಾರಸ್ವಾಮಿಯವರನ್ನು ದೂರವಾಣಿ ಸಂಖ್ಯೆ **9880487682** ಮುಖಾಂತರ ಸಂಪರ್ಕಿಸಿ.

ತಮ್ಮ ಆಗಮನಾಭಿಲಾಶಿಗಳು,

ವ್ಯವಸ್ಥಾಪಕ ನಿರ್ದೇಶಕರು
**KH** ಕಲಾ ಸೌಧ
ಬೆಂಗಳೂರು